ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	832
ಮಾನ್ಯ ಸದಸ್ಯರ ಹೆಸರು	ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	24-09-2020
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಬೆಳವಟಗಿ ಗ್ರಾಮದ ತಾಲ್ಲೂಕು ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಕರ್ತವ್ಯದಲ್ಲಿ (ಹಣಕಾಸಿನ) ಬಹಳಷ್ಟು ದುರುಪಯೋಗ ಮಾಡಿಕೊಂಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ; (ವಿವರ ನೀಡುವುದು)	ಬಂದಿರುತ್ತದೆ.
ಆ	ಈ ಕುರಿತು ಕೂಲಂಕುಷ ತನಿಖೆ ಮಾಡಿ ವರದಿ ನೀಡುವುದು;	ಶ್ರೀ ಉತ್ಪಲ ಉಮೇಶ ಶಿರೋಡಕರ, ದ್ವಿತೀಯ ದರ್ಜೆ ಸಹಾಯಕರು, ಪ್ರಾಥಮಿಕ ಆರೋಗ್ಯ ಕೇಂದ್ರ, ಬೆಳವಟಗಿ, ಹಳಿಯಾಳ ತಾಲ್ಲೂಕು, ಕಾರವಾರ ಜಿಲ್ಲೆ ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಇವರ ವಿರುದ್ದ ಸಿಬ್ಬಂದಿ ವರ್ಗದ ಕಾಲಬದ್ಧ ವೇತನ ರಜಾ ವೇತನ ಹೆಚ್.ಆರ್.ಎಂ.ಎಸ್. ಸಮಸ್ಯೆಗಳು ಮುಂತಾದ ಕೆಲಸ ಕಾರ್ಯಗಳಲ್ಲಿ ವಿಳಂಬ ಮಾಡುತ್ತಿರುವುದಾಗಿ ಮತ್ತು ಕೆಲಸ ಕಾರ್ಯಗಳನ್ನು ಮಾಡಿಕೊಡಲು ಹಣ ಬೇಡಿಕೆ ಇಟ್ಟು ಹಣ ಕೊಟ್ಟ ನಂತರ ಸತಾಯಿಸಿ ಕೆಲಸ ಮಾಡುತ್ತಿರುತ್ತಾರೆಂಬ ಆರೋಪದ ಬಗ್ಗೆ ಈ ನಿರ್ದೇಶನಾಲಯದ ಹಂತದಲ್ಲಿ ಕೆ.ಸಿ.ಎಸ್. (ಸಿಸಿಎ) ನಿಯಮದ ಪ್ರಕಾರ ದಿನಾಂಕ: 30/11/2016 ರಲ್ಲಿ ದೋಷಾರೋಪ ಪಟ್ಟಿಯನ್ನು ಜಾರಿಗೊಳಿಸಿ, ವಿಚಾರಣಾಧಿಕಾರಿಗಳನ್ನು ನೇಮಿಸಿ ಇವರ ವಿರುದ್ದದ ಆರೋಪಕ್ಕೆ ದಂಡನೆಯಾಗಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ ತಡೆಹಿಡಿದು ಸದರಿ ನೌಕರರನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಬೆಳವಟಗಿ ಇಲ್ಲಿಂದ ದೂರಿನ ಮೇಲೆ ಸಾರ್ವಜನಿಕ ಆಸ್ಪತ್ರೆ, ದಾಂಡೇಲಿ ಇಲ್ಲಿಗೆ ವರ್ಗಾವಣೆ ಮಾಡಿ ದಿನಾಂಕ: 11/12/2018ರ ಆದೇಶದಲ್ಲಿ ಆದೇಶಿಸಲಾಗಿರುತ್ತದೆ.

		ಸದರಿ ನೌಕರರು ಈ ದಂಡನಾದೇಶದ ವಿರುದ್ಧ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದು, ಮೇಲ್ಮನವಿ ಪ್ರಾಧಿಕಾರ ದಿನಾಂಕ: 11/12/2018 ರಲ್ಲಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತರಹಿತವಾಗಿ ತಡೆಹಿಡಿದಿರುವ ಆದೇಶವನ್ನು ರದ್ದುಗೊಳಿಸಿ ದಿನಾಂಕ: 28/03/2019 ರಲ್ಲಿ ಆದೇಶಿಸಲಾಗಿರುತ್ತದೆ.
ಇ	ಈಗಾಗಲೇ ಅವ್ಯವಹಾರ ಮಾಡಿರುವ ಸಿಬ್ಬಂದಿ ಸದರಿ ಸ್ಥಳದಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿರುವುದು ನಿಯಮದ ಉಲ್ಲಂಘನೆ ಅಲ್ಲವೆ? (ವಿವರ ನೀಡುವುದು)	ಸದರಿ ನೌಕರರನ್ನು ನಿರ್ದೇಶನಾಲಯದ ಪತ್ರದ ದಿನಾಂಕ: 11/12/2018 ರಂತೆ ಪ್ರಾಥಮಿಕ ಆರೋಗ್ಯ ಕೇಂದ್ರ, ಬೆಳವಟಗಿ, ಹಳಿಯಾಳ ತಾಲ್ಲೂಕು, ಕಾರವಾರ ಜಿಲ್ಲೆ ಇಲ್ಲಿಂದ ಸಾರ್ವಜನಿಕ ಆಸ್ಪತ್ರೆ, ದಾಂಡೇಲಿ ಇಲ್ಲಿಗೆ ದೂರಿನ ಮೇಲೆ ವರ್ಗಾವಣೆ ಮಾಡಿದೆ.

ಸಂಖ್ಯೆ: ಆಕುಕ 59 ಹೆಚ್‌ಪಿಸಿ 2020

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು